ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ,

ಶ್ರೀ ಹೆಚ್. ಎಂ. ರೇವಣ್ಣ.—ಮಾಗಡಿ ತಾಲ್ಲೂಕನ್ನು ಈ ಯೋಜನೆಯಲ್ಲಿ ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸಧ್ಯಕ್ಕೆ ಮಾಗಡಿ ತಾಲ್ಲೂಕನ್ನು ಸೇರಿಸಿಲ್ಲ. ಈ ಬಗ್ಗೆ ಬಹುಶಃ ಉತ್ತರವನ್ನು ನಾನು ಕೊಟ್ಟಿದ್ದೇನೆ. ೨೮ ಪ್ರಾಜೆಕ್ಟ್‌ಗಳನ್ನು ಕೇಂದ್ರ ಸರ್ಕಾರ ಏನು ಮಂಜೂರು ಮಾಡಿದೆ. ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಆನುಷ್ಠಾನ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಹೊಸದಾದಂಥ ಪ್ರಸ್ತಾವವನ್ನು ಕಳುಹಿಸಿದಾಗ ಮಾಗಡಿ ತಾಲ್ಲೂಕನ್ನು ಸೇರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಸ್ಥಿರ ಬೆಲೆಗಳ ನಿಗಧಿಪಡಿಸುವುದು

೧೧೦೯ ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರೇಷ್ಮೆ ಬಿತ್ತನೆ ಕೋಶಿಯಿಂದ ಮೊಟ್ಟೆಗಳನ್ನು ಮಾರಾಟ ಮಾಡಲು ಒಂದು ಸ್ಥಿರವಾದ ಬೆಲೆಯನ್ನು ನಿಗಧಿಗೊಳಿಸಲಾಗಿದೆಯೆ.

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ಎಸ್. ಆತ್ಮಾನಂದ ರೇಷ್ಮೆ ಸಚಿವರು.—

ಅ) ಇಲ್ಲ

ಆ) ಬಿತ್ತನೆ ಗೂಡಿನ ಬೆಲೆಯು ಏರುಪೇರುಗಳಿಂದ

ಶ್ರೀ ಕೆ.ಎಂ. ಪುಟ್ಟು.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ರೇಷ್ಮೆ ಮೊಟ್ಟೆಗಳನ್ನು ಸರ್ಕಾರಿ ಗ್ರೈನೇಜ್‌ಗಳಲ್ಲಿ ವರ್ಷಕ್ಕೆ ೩ರಿಂದ ೪ಸಾರಿ ವ್ಯತ್ಯಾಸದ ಬೆಲೆಯಲ್ಲಿ ಮಾರಾಟ ಮಾಡುತ್ತಿರುತ್ತಾರೆ. ಇವರು ಏನು ಖಾಸಗಿ ಮೊಟ್ಟೆ ಉತ್ಪನ್ನದಾರರಿಗೆ ನಿಗದಿಪಡಿಸಿದ ಒಂದು ದರದಲ್ಲಿ ಬಿತ್ತನೆ ಗೂಡನ್ನೂ ಕೊಡುತ್ತಿದ್ದಾರೋ ಅವರೂ ಸಹ ಇವರ ಹಿಡಿತದಲ್ಲಿ ಇದ್ದಾರೆ. ಈ ವರ್ಷ ೨೫೦ರಿಂದ ೩೦೦ ರೂಪಾಯಿಯವರೆಗೆ ಮೊಟ್ಟೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಇವರ ಅಧಿಕಾರಿಗಳೇ ಇದಕ್ಕೆ ಕಾರಣ. ಮತ್ತೆ ವಿಶ್ವಬ್ಯಾಂಕ್‌ನಿಂದ ಇವರು ನೆರವು ಪಡೆದಿದ್ದಾರೆ ವರ್ಷಕ್ಕೆ ಒಂದು ಸಾರಿ ಶೇಕಡಾ ೧೦ರಿಂದ ೧೫ ಪರ್‌ಸೆಂಟ್ ಜಾಸ್ತಿ ಮಾಡಬೇಕೇ ವಿನಹ ಸರ್ಕಾರಿ ಸ್ವಾಮ್ಯದಲ್ಲಿ ವರ್ಷಕ್ಕೆ ೩ಸಾರಿ ೪ಸಾರಿ ಮೊಟ್ಟೆಗಳ ಬೆಲೆಗಳನ್ನು ಏರಿಳಿಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲವೆಂದು ನನಗನಿಸುತ್ತದೆ. ಏಕೆಂದರೆ ಹಾಗೇನಾದರೂ ರೈತರಿಗೆ ಸಹಾಯ ಮಾಡಬೇಕೆಂದು ವಿಶ್ವಬ್ಯಾಂಕ್‌ನಲ್ಲಿ ಏನು ನೆರವು ಸಿಗುತ್ತದೆಯೋ ಆದರಲ್ಲಿ ವರ್ಷಕ್ಕೆ ೫ ಪೈಸೆಯಾದರೂ ರೈತರಿಗೆ ಸಬ್ಸಿಡಿ ರೂಪದಲ್ಲಿ ಕೊಟ್ಟು ಒಂದು ಸಮತೋಲನವಾದ ರೀತಿಯಲ್ಲಿ ಮೊಟ್ಟೆಗಳನ್ನು ಮಾರಾಟ ಮಾಡುವುದಕ್ಕೆ ಇವರಿಗೆ ಏನು ತೊಂದರೆ ಇದೆಯೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ:—ಮಾನ್ಯ ಅಧ್ಯಕ್ಷರೇ, ಈ ಖಾಸಗೀ ಮೊಟ್ಟೆ ತಯಾರಕರ ಮೇಲೆ ಬೆಲೆ ನಿಯಂತ್ರಣ ಮಾಡುವುದಕ್ಕೆ ಸರ್ಕಾರದ ಕೈಯಲ್ಲಿ ಇಲ್ಲ. ಖಾಸಗೀ ಮೊಟ್ಟೆ ತಯಾರಕರ ಮೇಲೆ ಮೇಲೆ ಗುಣ ನಿಯಂತ್ರಣ ಇರತಕ್ಕಂಥದ್ದು, ನಮ್ಮ ಸರ್ಕಾರದ ಬಿತ್ತನೆ ಕೋಶಿಯಲ್ಲಿ ಏನು ಮೊಟ್ಟೆ ಉತ್ಪಾದನೆ ಮಾಡುತ್ತಾರೋ ಅದರ ಒಂದು ಮೂಲ ಉದ್ದೇಶ ರೈತರಿಗೆ ಸೇವೆ ಸಲ್ಲಿಸಬೇಕೆಂದು ಆ ಉದ್ದೇಶ ಇಟ್ಟುಕೊಂಡು ನಾವು ಕೂಡ ಇರತಕ್ಕಂಥಾದ್ದರಲ್ಲಿ ೪ಕ್ಕೆ ಪರ್‌ಸೆಂಟ್ ಮೊಟ್ಟೆಯನ್ನು ಮಾಡತಕ್ಕಂಥ ಹೊಣೆ ಇರುವ ಹಾಗೆ ಈ ಮೊಟ್ಟೆ ಉತ್ಪಾದನೆ ಅಥವಾ ಬೆಲೆ, ಮೈಸೂರು ವಲಯದ ಒಂದು ತಳಿಯ ಬೆಲೆ ಮೇಲೆ ಹಾಗೂ ಬೈ ವೋಲ್ಟೇನ್ ತಳಿಯ ಬೆಲೆ ಮೇಲೆ ಇರುತ್ತದೆ. ಈ ಮೊಟ್ಟೆ ಬೆಲೆ ನಿಗದಿ ಮಾಡತಕ್ಕಂಥಾದ್ದು ಈ ಎರಡುಗೂಡಿಗಳ ಬೆಲೆಗಳ ಮೇಲೆ ನಾವು ನಿಗದಿ ಮಾಡುತ್ತೇವೆ. ಮೈಸೂರು ತಳಿ ಆಗಾಗ್ಗೆ ಆದರ ಬೇಡಿಕೆ ಮತ್ತು ಉತ್ಪಾದನೆ ಮೇಲೆ ಅಲ್ಲಿರತಕ್ಕಂಥ ಮಾರುಕಟ್ಟೆ ಸಂಸ್ಥೆಯವರು ಮೈಸೂರು ತಳಿಯ ಗೂಡಿನ ಬೆಲೆಯನ್ನು ನಿಗದಿ ಮಾಡುತ್ತಾರೆ. ಆ ನಿಗದಿ ಮಾಡತಕ್ಕಂಥ ಬೆಲೆಯನ್ನು ನಾವೂ ಕೂಡ ಅದೇ ರೀತಿಯಲ್ಲಿ ಕೊಂಡುಕೊಂಡು ಹಾಗೂ ಬೈ ವೋಲ್ಟೇನ್ ತಳಿಯನ್ನು ಕೂಡ ಇಲಾಖೆಯವರು ನಿಗದಿ ಮಾಡಿಸಿರತಕ್ಕಂಥಾದ್ದನ್ನು ಕೊಂಡುಕೊಂಡು ಇವೆರಡನ್ನೂ ಸೇರಿ ಈ ಮೊಟ್ಟೆ

ಉತ್ಪಾದನೆಗೆ ಉಪಯೋಗಿಸಿಕೊಳ್ಳುತ್ತೇವೆ. ಹೆಚ್ಚಿನ ಅಂತ ಉತ್ಪಾದನೆಯಲ್ಲಿ ಈ ಗೊಡಿನ ಬೆಲೆ ಇರುವುದರಿಂದ ನಾವು ಈ ಬೆಲೆಯನ್ನು ಆಗಾಗ್ಗೆ ಹೆಚ್ಚಳ ಮಾಡಬೇಕಾಗುತ್ತದೆ. ಬೇರೆ ಯಾವ ಉದ್ದೇಶವೂ ಇಲ್ಲಾ.

ಶ್ರೀ ಕೆ.ಎಂ. ಪುಟ್ಟು.—ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಕೇಳುತ್ತಿರುವುದು, ಈ ಬೆಲೆಯನ್ನು ವರ್ಷಕ್ಕೆ ೩–೪ ಸಾರಿ ಸರ್ಕಾರಿ ಗ್ರೈನೇಜ್‌ಗಳು ಜಾಸ್ತಿ ಮಾಡುತ್ತಿವೆ. ವಿಶ್ವಬ್ಯಾಂಕ್‌ನಿಂದ ಕೋಟ್ಯಾಂತರ ರೂಪಾಯಿಗಳ ಹಣವನ್ನು ಸುರಿಯುತ್ತಿದ್ದರೂ ಸಹ ರೈತನಿಗೆ ಅದರಿಂದ ನೇರವಾಗಿ ೩ ಕಾಸಿನ ಪ್ರಯೋಜನವಾಗುತ್ತಿಲ್ಲ. ಇದು ವ್ಯಾಪಾರಿ ಸಂಸ್ಥೆಯಾಗಿದೆ. ಸರ್ಕಾರ ದವರು ಸಬ್ಸೀಡಿ ಕೊಟ್ಟು ನಿಯಂತ್ರಣದಲ್ಲಿ ಇಟ್ಟುಕೊಂಡು ರೈತರಿಗೆ ನೆರವಾಗಬೇಕು. ಸಬ್ಸೀಡಿ ಕೊಡಲಿಕ್ಕೆ ನಿಮಗೆ ಆಗಂತ್ತದೆಯೇ ? ವರ್ಷಕ್ಕೆ ಒಂದು ಸಾರಿ ಮಾತ್ರ ೧೦ ರಿಂದ ೧೫ ಪರ್‌ಸೆಂಟ್ ಮೊಟ್ಟೆ ಬೆಲೆ ಜಾಸ್ತಿ ಮಾಡಲಿಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ ಎಂದು ಮಾನ್ಯ ಸಚಿವರನ್ನು ಅಧ್ಯಕ್ಷರ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಂ.ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಈ ಮೊಟ್ಟೆ ಉತ್ಪಾದನೆಗೆ ನಾವು ಬೇರೆಯವರ ತರಹ ಕೊಂಡುಕೊಳ್ಳಬೇಕಾದ ಪರಿಸ್ಥಿತಿ ಇದೆ. ಏಕೆಂದರೆ, ಅದು ರೈತರಿಗೆ ಕೊಡತಕ್ಕಂಥ ದುಡ್ಡು. ರೈತರು ಯಾವ ಬೆಲೆ ಕೇಳುತ್ತಾರೋ ಆ ಬೆಲೆಗೆ ಕೊಂಡುಕೊಳ್ಳಬೇಕಾಗುತ್ತದೆ. ಸರ್ಕಾರಿ ಬಿತ್ತನೆ ಕೋಳಿಯದು ಬೇರೆ, ಖಾಸಗೀ ಬಿತ್ತನೆ ಕೋಳಿಗೆ ಬೇರೆ ಬೆಲೆ ಇರಂವುದಿಲ್ಲ. ಅವರು ಹೇಳತಕ್ಕಂಥದ್ದು ಕನಿಷ್ಟ ಅಥವಾ ಗರಿಷ್ಟ ಮಿತಿಯನ್ನು ಏನಾದರೂ ಕೂಡ ರೈತರ ಹಿತದೃಷ್ಟಿಯಿಂದ ಬೆಲೆ ನಿಗದಿ ಮಾಡಲು ಆಲೋಚನೆ ಮಾಡುತ್ತೇವೆ.

೯–೪೦ ಎ.ಎಂ.

ಶ್ರೀ ಕೆ.ಹೆಚ್. ಹನುಮೇಗೌಡ.—ರೈತರಿಗೆ ರೇಷ್ಮೆ ಮೊಟ್ಟೆಗಳನ್ನು ಸರಕಾರದ ವತಿಯಿಂದ ಇವೊತ್ತು ಪೂರ್ತಿಯಾಗಿ ಸಿಗುತ್ತಾ ಇಲ್ಲ. ಹೀಗಾಗಿ ಬೆಳಿಗಾರರು ಖಾಸಗೀಯವರಿಂದ ಕೊಂಡು ಕೊಳ್ಳುತ್ತಾರೆ. ಅನೇಕ ಸಲ ರೋಗ ರಹಿತವಾದಂಥ ಮೊಟ್ಟೆಗಳು ಸಿಗದೆ ರೇಷ್ಮೆಬೆಳೆ ಹಾಳಾಗುತ್ತಾ ಇದೆ. ಆದುದರಿಂದ ಸರ್ಕಾರದ ವತಿಯಿಂದಲೇ ರೋಗರಹಿತವಾದ ಮೊಟ್ಟೆಗಳನ್ನು ಕೊಡುವುದಕ್ಕೆ ಏನಾದರೂ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ ? ಈಗ ಕೆಲವು ಖಾಸಗೀ ಮೊಟ್ಟೆ ತಯಾರಿಕಾ ವ್ಯಾಪಾರಿಗಳು ರೋಗ ಇರತಕ್ಕಂಥ ಮೊಟ್ಟೆಗಳನ್ನು ಕೊಟ್ಟು ಬೆಳೆ ಹಾಳು ಮಾಡುತ್ತಿದ್ದಾರೆ. ಇದರ ಬಗ್ಗೆ ಗುಣನಿಯಂತ್ರಣಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ಎಸ್. ಆತ್ಮಾನಂದ.—ರೇಷ್ಮೆ ಬೆಳೆಗಾರರಿಗೆ ರೋಗರಹಿತವಾದ ಮೊಟ್ಟೆಗಳನ್ನು ಒದಗಿಸಬೇಕೆಂಬುದು ಸರಕಾರದವರ ಉದ್ದೇಶ. ಈ ದಿಸೆಯಲ್ಲಿ ರೈತರುಗಳಿಗೆ ನಿಗದಿತ ಪ್ರಮಾಣದಲ್ಲಿ ಮೊಟ್ಟೆಗಳನ್ನು ಸರಬರಾಜು ಮಾಡುವುದಕ್ಕೆ ಸರ್ವ ಪ್ರಯತ್ನಗಳನ್ನು ಸರಕಾರವು ಕೈಗೊಂಡಿದೆ. ಅದನ್ನು ಇನ್ನೂ ಉತ್ತಮ ಪಡಿಸುವುದಕ್ಕೆ ಸೂಕ್ತ ಕ್ರಮಗಳನ್ನು ಅನುಸರಿಸುತ್ತೇವೆ. ಖಾಸಗೀಯವರ ಮೇಲೆ ಸರಕಾರದವರು ಮೊಟ್ಟೆಗಳ ಗುಣನಿಯಂತ್ರಣದ ಬಗ್ಗೆ ಮಾತ್ರ ಹಿಡಿತ ಇಟ್ಟುಕೊಂಡಿದ್ದಾರೆ. ನಮ್ಮ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಖಾಸಗೀ ಮೊಟ್ಟೆತಯಾರಕರುಗಳ ಕೋಳಿಗಳಿಗೆ ಹೋಗಿ ಗುಣನಿಯಂತ್ರಣದ ಬಗ್ಗೆ ಪರೀಕ್ಷೆ ಮಾಡುತ್ತಾರೆ. ರೈತರ ಹಿತದೃಷ್ಟಿಯಿಂದ ಉತ್ತಮ ಗುಣಮಟ್ಟದ ಮೊಟ್ಟೆಗಳನ್ನು ಒದಗಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ.—ಈ ರೇಷ್ಮೆ ಮೊಟ್ಟೆಗಳ ಉತ್ಪಾದನೆ ಎರಡು ವಲಯಗಳಲ್ಲಿ ಆಗುತ್ತದೆ. ಒಂದು ಖಾಸಗೀ ಮತ್ತು ಇನ್ನೊಂದು ಸರಕಾರಿ ಕ್ಷೇತ್ರದಲ್ಲಿ ಸದ್ಯಕ್ಕೆ ಬೇಡಿಕೆ ಇರತಕ್ಕಂಥಾದ್ದಲ್ಲಿ ಶೇಕಡ ೪೦ ರಷ್ಟು ಸರಕಾರದ ವತಿಯಿಂದ ಮತ್ತು ಶೇಕಡ ೬೦ರಷ್ಟು ಖಾಸಗೀ ವಲಯದಿಂದ ಪೂರೈಸಲ್ಪಡುತ್ತಿವೆ. ಹೀಗಿರುವುದರಿಂದ ಮೊಟ್ಟೆಗಳ ಬೆಲೆ ನಿಗದಿ ಪಡಿಸುವಂಥ ಕಾರ್ಯವು ಗರಿಷ್ಠ ಮತ್ತು ಕನಿಷ್ಟ ಇಷ್ಟು ಎಂದು ನಿಗದಿಪಡಿಸಬೇಕು. ಈಗ ಬೆಲೆಯು ಮೇಲೆ ಒಂದು ನಿಯಂತ್ರಣ ಇಲ್ಲವಾಗಿದೆ. ಈ ಬಗ್ಗೆ ಕಳೆದ ಎರಡು ವರ್ಷಗಳಲ್ಲಿ ನಡೆದ ಬೆಲೆಯನ್ನು ಅಭ್ಯಸಿಸಿ ಈಗ ಒಂದು ಕನಿಷ್ಟ ಮತ್ತು ಗರಿಷ್ಟ ಬೆಲೆಯನ್ನು ಗೊತ್ತು ಮಾಡಬೇಕು. ಸರಕಾರದವರಿಗಿಂತಲೂ ಖಾಸಗೀಯವರು ಶೇಕಡ ೫೦ರಷ್ಟು ಜಾಸ್ತಿ ಮಾಡಬಹುದು. ಆದರೆ ಅವರ ಇಚ್ಛಾನುಸಾರ ಬೆಲೆ ನಿಗದಿ ಮಾಡಲು ಬಿಡಬಾರದು. ಇಂಥ ಒಂದು ಪದ್ಧತಿಯನ್ನು ರಾಜ್ಯದಲ್ಲಿ ಜಾರಿಗೆ ತರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಎಸ್. ಆತ್ಮಾನಂದ.—ರೇಷ್ಮೆ ಇಲಾಖೆಯೂ ಕೂಡ ಈ ಬಗ್ಗೆ ಸೂಕ್ತ ದಿಸೆಯಲ್ಲಿ ಆಲೋಚನೆ ಮಾಡುತ್ತಿದೆ. ಮಾನ್ಯ ಸದಸ್ಯರಾದ ರಾಜೂಗೌಡರು ಈ ಬಗ್ಗೆ ಕೊಟ್ಟ ಸಲಹೆಯನ್ನು ಜಾರಿಗೆ ತರಲು ರೈತರ ಹಿತದೃಷ್ಟಿಯಿಂದ ಸರಕಾರ ಪರಿಶೀಲಿಸುತ್ತದೆ ಎಂದು ಹೇಳ ಬಯಸುತ್ತೇನೆ.

ಶ್ರೀ ಪಿ.ಜಿ ಆರ್. ಸಿಂಧ್ಯ —ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತಿರುವ ಹಾಗೆ ರೇಷ್ಮೆ ಬೆಳೆಗಾರರು ಸರಕಾರದಿಂದ ಏನನ್ನೂ ಅಪೇಕ್ಷೆ ಮಾಡುವುದಿಲ್ಲ. ಏಕೆಂದರೆ ಸರಕಾರಿ ರೇಷ್ಮೆ ಬಿತ್ತನೆ ಕೋಠಿಗಳನ್ನು ಮತ್ತು ಖಾಸಗೀ ಕ್ಷೇತ್ರದಲ್ಲಿಯ ಉತ್ಪಾದನೆ, ಬೆಲೆ ಮತ್ತು ಗುಣಮಟ್ಟ ಇತ್ಯಾದಿಗಳನ್ನು ಹೋಲಿಕೆ ಮಾಡಿದ್ದರೆ ಸರಕಾರಕ್ಕಿಂತಲೂ ೧೦೦-೨೦೦ ಪಟ್ಟು ಖಾಸಗೀಯವರು ಚೆನ್ನಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ ಖಾಸಗೀಯವರ ಮೇಲೆ ನಿಯಂತ್ರಣ ಇಡುವುದಕ್ಕೆ ನಿಮ್ಮ ಕೆಳಮಟ್ಟದ ಅಧಿಕಾರಿಗಳಿಗೆ ಕೊಟ್ಟರೆ ಅವರಿಗೆ ಹಣ ಮಾಡುವುದಕ್ಕೆ ಒಂದು ಅನುಕೂಲ ಮಾಡಿ ಕೊಟ್ಟ ಹಾಗೆ ಆಗುತ್ತದೆಯೇ ಹೊರತು ಇದರಿಂದ ಯಾವ ಸಾಧನೆಯೂ ಆಗಲಾರದು ಅನ್ನಿಸುತ್ತದೆ.

ಶ್ರೀ ಎಂ. ಎಸ್. ಆತ್ಮಾನಂದ.— ಖಾಸಗೀಯವರ ಮೇಲೆ ಗುಣನಿಯಂತ್ರಣದ ಬಗ್ಗೆ ಮಾತ್ರ ಸರಕಾರ ಹತೋಟಿ ಇಟ್ಟುಕೊಂಡಿದೆ. ಬೆಲೆ ಬಗ್ಗೆ ಇಲ್ಲ.

ಅಬಕಾರಿ ಹರಾಜಿನಿಂದ ಬಂದ ಆದಾಯ

೮೫೩. ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್)—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ೧೯೯೦-೯೧ ನೇ ಸಾಲಿನಲ್ಲಿ ಅಬಕಾರಿ ಹರಾಜಿನಿಂದ ಎಷ್ಟು ಮೊತ್ತವನ್ನು ನಿರೀಕ್ಷಿಸಲಾಗಿದೆ?

ಆ) ಸರ್ಕಾರಕ್ಕೆ ಎಷ್ಟು ಹೆಚ್ಚಿಗೆ ಪರಮಾನ ಬರುವುದು ?

ಇ) ಇದರಲ್ಲಿಯ ಹಣವನ್ನು ಹಿಂದುಳಿದ ಜನಾಂಗದ ಕಲ್ಯಾಣಕ್ಕಾಗಿ, ವಿಶೇಷವಾಗಿ ಅವರ ಶಿಕ್ಷಣಕ್ಕೋಸ್ಕರ ಖರ್ಚು ಮಾಡಲಾಗುವುದೆ ?

ಈ) ಹಾಗಿದ್ದಲ್ಲಿ ಯೋಜನೆಗಳ ಹೆಸರುಗಳೇನು ?

ಶ್ರೀ. ಎಂ. ರಾಜೇಶ್ವರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಸಚಿವರು .—

ಅ)	ಹರಾಜಿನಿಂದ ನೇರ ಉತ್ಪನ್ನ	ರೂ. ೩೮೦.೨೧ ಕೋಟಿ
	ಆಪರೋಕ್ಷ ಉತ್ಪನ್ನ (ಹರಾಜು-ಮಾರಾಟ ತೆರಿಗೆ)	೮೦.೩೬ ಕೋಟಿ
	ಒಟ್ಟು ರೂ.	೪೬೦.೫೭ ಕೋಟಿ
ಆ)	ಹರಾಜಿನಿಂದ ಅಧಿಕ ಉತ್ಪನ್ನ	ರೂ. ೨೪೨.೦೦ ಕೋಟಿ
	ಇತರೇ ಉತ್ಪನ್ನ	ರೂ. ೭೨.೦೦ ಕೋಟಿ
	ಒಟ್ಟು ರೂ.	೩೧೪.೦೦ ಕೋಟಿ

ಇ) ಮತ್ತು (ಈ) ಅಧಿಕ ಉತ್ಪನ್ನವನ್ನು ಹೇಗೆ ಖರ್ಚು ಮಾಡಬೇಕೆಂಬುದು ಪರಿಶೀಲನೆಯಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—The total amount expected from excise auction during 1990-91 is Rs. 380 crore, indirect receipts 102 crore. Total 482 crore. The Government is going to get this year, an additional income Rs. 307 crore. ಹೀಗೆ ತಮಗೆ ಸುಮಾರು ೩೦೭ ಕೋಟಿ ರೂಪಾಯಿಗಳಷ್ಟು ಅಡಿಶನಲ್ ಆದಾಯ ಬರುತ್ತಾ ಇದೆ. ಈ ಅಧಿಕ ಉತ್ಪನ್ನವನ್ನು ಹೇಗೆ ಖರ್ಚು ಮಾಡಬೇಕೆಂಬುದನ್ನು ಸರಕಾರ ಪರಿಶೀಲಿಸುತ್ತಿದೆ ಎಂದು ಹೇಳಿದ್ದೀರಿ. ಇದನ್ನು ಹೇಗೆ ಮತ್ತು ಯಾವ ಪ್ರಮಾಣದಲ್ಲಿ ಯಾವುದಕ್ಕೋಸ್ಕರವಾಗಿ ವೆಚ್ಚ ಮಾಡಲಿದ್ದೀರಿ ಎಂದು ನಿರ್ದಿಷ್ಟವಾಗಿ ಹೇಳ ಬೇಕು. ಏಕೆಂದರೆ ಈ ಒಂದು ಉತ್ಪನ್ನ ಬರುತ್ತಿರುವುದು ಹೆಚ್ಚಾಗಿ ವೀಕರ್ ಸೆಕ್ಷನ್‌ಗಳಿಂದಲೇ ಎಂದು